Department and Health Department. These factors largely contribute for the delay.

ಶ್ರೀ ಎಂ. ಲಿಂಗೇಗೌಡ.—ಅಕ್ವಿಜಿಷನ್ ಮಾಡುವ ನಂಬಂದಧಲ್ಲಿ ಕನಕಪುರ ತಾಲ್ಲೂಕಿನಲ್ಲಿ ಇನ್ನೂ 101 ಕೇಸುಗಳು ಬಾಕಿ ಇವೆ ಎಂದು ಜವಾಬು ಕೊಟ್ಟು ಎಲ್ಲೆಲ್ಲಿ ಎಷ್ಟೆಷ್ಟು ರೆಕಾರ್ಡ್ ನಿಂತಿವೆ ಎನ್ನುವ ವಿಷಯವನ್ನು ತಿಳಿಸಿದ್ದೀರಿ. ಅದರಲ್ಲಿ 10-12 ವರ್ಷ ಗಳಿಂದ ದಿಲೇ ಆಗುತ್ತಾ ಇರುವ ಕೇಸುಗಳನ್ನು ಜಾಗ್ರತೆ ಅಕ್ವೈರ್ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಅತಿ ಜಾಗ್ರತೆಯಾಗಿ ಮಾಡಬೇಕೆಂದು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದೆ.

ಶ್ರೀ ಎಂ. ಲಿಂಗೇಗೌಡ.—ಹಾಗಿದ್ದರೂ ಕೂಡ ಅನೇಕ ಕೇಸುಗಳಲ್ಲಿ ಒಂದು ರೆಕಾರ್ಡು ಎಂಟು ಹತ್ತು ಸಾರಿ ವಾಪಸ್ಸು ಹೋಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಕೇಸುಗಳಲ್ಲಿ ಹಾಗೆ ಆಗಿದೆ.

———

Public Works Department Licensed Contractors in Hosadurga Taluk.

*Q.— 150. Sri B. S. SANKARAPPA (Hosadurga).—

Will the Government be pleased to state :—

(*a*) the total number of P.W.D. licensed contractors in Hosadurga Taluk;

(*b* whether it is not a fact that works have suffered after introducing the licensing system ?

A.—Sri H. M. CHANNABASAPPA (Minister for Public Works and Electricity).—

(*a*) There are twenty-two registered contractors in Hosadurga Taluk.

(*b*) No.

Sri B. S. SHANKARAPPA.—Sir with reference to answer (b), may I know whether it is not a fact that on account of want of contractors in some areas, work has been stopped ?

†Sri M. N NAGHNOOR (Deyuty Minister for Public Works).—That is not the experienc of the Division.

Sri B. S. SHANKARAPPA.—Is it not a fact that Belagur Tank Feeder Channel work has been completely stopped for three months on account of want of contractors ?

Sri H. M. CHANNABASAPPA.—That is due to want of good contractors.

Sri B. S. SHANKARAPPA.—Before introducing this system, the work was in good swing and there was progress. But after this scheme was introduced, there are no tenders because the local contractors are incapable of producing solvency certificates.

Sri H. M. CHANNABASAPPA.—To such of those people who are not capable of producing solvency certificates and who have not got financial stability, it is very strange that the Hon'ble Member is pleading to entrust this work.

ಶ್ರೀ ಟಿ. ಹನುಮಯ್ಯ.—ಮಾನ್ಯ ಮಂತ್ರಿಗಳು ಸಾರ್‌ವೆನ್ಸಿ ಸರ್ಟಿಫಿಕೇಟ್ ಇಲ್ಲದೆ ಕಂಟ್ರಾಕ್ಟ್‌ಕೊಡುವುದು ಕಷ್ಟ ಎಂದು ಹೇಳಿದ್ದಾರೆ. ಇಷ್ಟು ವರ್ಷಗಳ ವರೆಗೂ ಸಾರ್‌ವೆನ್ಸಿ ಸರ್ಟಿಫಿಕೇಟ್ ಇಲ್ಲದೆ ಕಂಟ್ರಾಕ್ಟ್ ನಡೆಯಲಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅನೇಕ ವರ್ಷಗಳಿಂದ ಅನೇಕ ಕೇಸುಗಳು ನಿಂತು ತಾಪತ್ರಯವಾಗಿ ಅನೇಕ ಪ್ರಶ್ನೆಗಳನ್ನು ಕೇಳುತ್ತಾ ಇರುವ ಪರಿಸ್ಥಿತಿ ಬಂದಿರುವುದು ಗೊತ್ತಿದೆ.

ಶ್ರೀ ಟಿ. ಹನುಮಯ್ಯ.—ಹಿಂದಿನಿಂದ ಸಾರ್‌ವೆನ್ಸಿ ಸರ್ಟಿಫಿಕೇಟ್ ಇಲ್ಲದೆ ಕಂಟ್ರಾಕ್ಟರುಗಳು ಕಂಟ್ರಾಕ್ಟ್ ಮಾಡಿದ್ದಕ್ಕೆ ಸರ್ಕಾರಕ್ಕೆ ಎಷ್ಟು ನಷ್ಟವಾಗಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ಪೆಸಿಫಿಕ್ ಪ್ರಶ್ನೆಗಳನ್ನು ಕೇಳಿದರೆ ಉತ್ತರಗಳನ್ನು ಓದಗಿಸಿಕೊಡುತ್ತೇವೆ.

ಶ್ರೀ ಟಿ. ಹನುಮಯ್ಯ.—ಸಾರ್‌ವೆನ್ಸಿ ಸರ್ಟಿಫಿಕೇಟ್ ಇಲ್ಲದೆ ಇರುವುದರಿಂದ ಸರ್ಕಾರಕ್ಕೆ ಎಷ್ಟು ಲಾಸ್ ಆಗಿದೆ ದಯವಿಟ್ಟು ತಿಳಿಸಿ.

Sri H. M. CHANNABASAPPA.—Not a question of loss. It is a question of delay and consequent loss to the nation. If you put a difinite question about the loss with regard to a particular work, I will be glad to firnish the answer.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಾವು ಟೆಂಡರ್ ಕರೆದಾಗ ಕಂಟ್ರಾಕ್ಟರುಗಳಿಂದ ಡೆಪಾಜಿಟ್ ಪೊಬಲಿಲಗು ಎಂದು ಕಣ ತೆಗೆದುಕೊಳ್ಳುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತೆಗೆದುಕೊಳ್ಳಲಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆ ಡಿಪಾಜಿಟ್ ಮೊಬಲಗು ಸಾಲದೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ತೀರ ಅಲ್ಪ ಮೊಬಲಗು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—5 ಸಾವಿರ 10 ಸಾವಿರದೊಳಗಿರತಕ್ಕ ಕಾಮಗಾರಿಗಳಿಗೆ ಈ ಒಂದು ವಿನಾಯಿತಿ ಕೊಟ್ಟರೆ ಅದರಿಂದ ಒಳ್ಳೆಯದಾಗುವುದಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—5 ಸಾವಿರದೊಳಗಿರತಕ್ಕ ಕಾಮಗಾರಿಗಳನ್ನು ಯಾವ ಡೆಪಾಜಿಟ್ಟೂ ಇಲ್ಲದೆ 5ನೆಯ ದರ್ಜೆಯ ಕಂಟ್ರಾಕ್ಟರುಗಳಿಗೆ ಲೈಸೆನ್ಸ್ ಕೊಡಬಹುದೆಂದು ಹುಕುಂ ಆಗಿದೆ. ಅವರು ಈಗಾಗಲೇ ಕೆಲವು ಕೆಲಸಗಳನ್ನು ನಡೆಸುತ್ತಿರಬಹುದು.

ಶ್ರೀ ಎಚ್. ಜಿ. ನರಸಿಂಹೇಗೌಡ.—ಸರ್ಕಾರದವರು ಈ ಲೈಸೆನ್ಸ್ ಪದ್ಧತಿಯನ್ನು ಜಾರಿಗೆ ತಂದ ಮೇಲೆ ರೂಲ್ಸ್ ಪ್ರಕಾರ ಕೆಲಸ ಮಾಡುವಂಥ ಕಂಟ್ರಾಕ್ಟರುಗಳು ಸಿಕ್ಕಿಲ್ಲವೆ ಸರ್ಕಾರಕ್ಕೆ ಹೆಚ್ಚು ಲುಕ್ಸಾನಾಗುತ್ತಿದೆಯಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದುವರೆಗೂ ಅಂಥ ನಿದರ್ಶನಗಳು ಯಾವುವೂ ಸರ್ಕಾರದವರ ಗಮನಕ್ಕೆ ಬಂದಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಹಿಂದೆ ಕಂಟ್ರಾಕ್ಟ್ ಕೆಲಸ ಮಾಡುತ್ತಿದ್ದವರಿಗೆ ಮಾತ್ರ ಲೈಸೆನ್ಸ್ ಕೊಡಬೇಕು, ಹೊಸಬಾಗಿ ಕಂಟ್ರಾಕ್ಟ್ ಕೆಲಸ ಮಾಡಲು ಬರತಕ್ಕ ಜನಗಳಿಗೆ ಲೈಸೆನ್ಸ್ ಕೊಡಬಾರದೆಂಬ ನಿಯಮವನ್ನೇನಾದರೂ ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ದುಡ್ಡುಸಾಲದೆ ಇರತಕ್ಕ ಕಂಟ್ರಾಕ್ಟರ್ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ತಾವು ಹೇಳುತ್ತೀರಿ. ಜನರಲ್ಲಿ ನಂಬಿಕೆ ಇಟ್ಟುಕೊಂಡು ಬ್ಯಾಂಕು ವಗೈರೆಗಳಲ್ಲಿ ಸಾಲಮಾಡಿ ಕೆಲಸ ನಡೆಸತಕ್ಕ ಕಂಟ್ರಾಕ್ಟರುಗಳಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಬ್ಯಾಂಕುಗಳಿಂದ ಒಂದು ಸರ್ಟಿಫಿಕೇಟ್ ತಂದರೆ ಆ ಕಂಟ್ರಾಕ್ಟರುಗಳಿಗೂ ಕೆಲಸ ಕೊಡಲಾಗುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ. ಬಂಡವಾಳವಿಲ್ಲದ ಕಂಟ್ರಾಕ್ಟರುಗಳಿಂದ ಕೆಲಸ ಬಹಳ ನಿಧಾನವಾಗುವುದರಿಂದ 20 ಲಕ್ಷ ರೂಪಾಯಿಗಳ ಬಂಡವಾಳಗಾರರಿಗೇ ಈ ಕಂಟ್ರಾಕ್ಟ್‌ಗಳನ್ನು ಕೊಡಲು ಏರ್ಪಾಡು ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೇನೂ ನಿಗದಿ ಮಾಡಿಲ್ಲ.

Sri A. R. BADRI NARAYAN.—Why was this system introduce l ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೆನ್ನೆಯ ದಿವಸ ಇಂತಹದೇ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದೆ. ನಮ್ಮ ಸಂಸ್ಥಾನದಲ್ಲಿ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ಪದ್ಧತಿಯಿತ್ತು. ಅದನ್ನು ಸಮನ್ವಯಗೊಳಿಸಲು ಈ ಹೊಸ ಪದ್ಧತಿಯನ್ನು ಜಾರಿಗೆ ತಂದದ್ದು ಒಂದು ಕಾರಣ. ಮತ್ತೊಂದು ಕಾರಣವೇನೆಂದರೆ.—

To ensure that only persons with means and necessary qualifications and equipment may take up the works.

ಶ್ರೀ ಜಿ. ಎಸ್. ಪುಟ್ಟಣ್ಣ.—ಲೈಸೆನ್ಸ್ಡ್ ಕಂಟ್ರಾಕ್ಟರುಗಳಿಗೆ ಸರ್ಕಾರದಿಂದ ಹಣವನ್ನು ಅಡ್ವಾನ್ಸಾಗಿ ಕೊಡತಕ್ಕ ಪದ್ಧತಿಯೊಂದು ಜಾರಿಯಲ್ಲಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯೋಗ್ಯ ರೀತಿಯಲ್ಲಿ ಕೆಲಸ ಮಾಡತಕ್ಕ ಲೈಸೆನ್ಸ್ಡ್ ಕಂಟ್ರಾಕ್ಟರುಗಳಿಗೆ ಮುಂಗಡವಾಗಿ ಹಣವನ್ನು ಕೊಡತಕ್ಕಂಥ ಒಂದು ಅಧಿಕಾರ ಸಂಬಂಧಪಟ್ಟ ಅಧಿಕಾರಿಗಳಿಗೆ ಯಾವಾಗ್ಲೂ ಇದ್ದೇ ಇದೆ.

Sri B. RACHIAH.—What is the amount received by Government as registration fees ?

Sri H. M. CHANNABASAPPA.—A paltry sum of Rs. 10.

Sri C. J. MUCKANNAPPA.—Will the Government be pleased to revise their decision so that works amounting to between Rs. 5,000 and 10,000 may be allotted to contractors without security for the purpere of expediting small works ?

Sri H. M. CHANNABASAPPA.—We have passed orders to the effect that works costing less than Rs. 5,000 can be given to Class V, Registered Contractors without demanding solvency certificates. This will be tried and after experience is gained, we will consider the question.

ಶ್ರೀ ಬಿ. ಎಸ್. ಶಂಕರಪ್ಪ.—ಸಾರ್ವೆನ್ಸಿ ಕೊಡಲಾದಂಥ ಕೆಲವು ಹಿಂದುಳಿದ ಜನಾಂಗದ ಕಂಟ್ರಾಕ್ಟರುಗಳು ಅವರಲ್ಲಿರತಕ್ಕ ಒಂದು ನಂಬಿಕೆಯ ಮೇಲೆ ಜನರಿಂದ ಸಾಲಮಾಡಿ ಕೆಲಸಗಳನ್ನು ಪೂರೈಸಿ—ಆ ಕಂಟ್ರಾಕ್ಟ್ ಹಣವನ್ನು ಲೈಸೆನ್ಸ್‌ದಾರರ ಹೆಸರಿನಲ್ಲಿ ಡ್ರಾ ಮಾಡುತ್ತಿರುವ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ! ಅಂಥವರಿಗೆ ಲೈಸೆನ್ಸ್ ಕೊಡಲು ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—5,000 ರೂಪಾಯಿಗಳೊಳಗಿರತಕ್ಕ ಕಾಂಟ್ರಾಕ್ಟಿಗಳನ್ನು ತೆಗೆದುಕೊಳ್ಳಲು 5ನೆಯ ದರ್ಜೆಯ ಕಂಟ್ರಾಕ್ಟರುಗಳನ್ನು ಈಗಾಗಲೇ ಮೊಕರೂರು ಮಾಡಲಾಗಿದೆ. ಅವರೇನೂ ಸಾರ್ವೆನ್ಸಿ ಸರ್ಟಿಫಿಕೇಟ್ ಕೊಡಬೇಕಾಗಿಲ್ಲ.

ಶ್ರೀ ಎಂ. ರಾಮಪ್ಪ.—ಸಹಕಾರ ಸಂಘಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲು ಆ ಸಂಸ್ಥೆಗಳಿಗೆ ಲೈಸೆನ್ಸ್ ಕೊಟ್ಟು ತನ್ಮೂಲಕ ಈ ಕೆಲಸಗಳನ್ನು ಮಾಡುವಂತೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮ್ಮ ನಿಯಮಾವಳಿಗೆ ಒಳಗಾಗಿ ಕೆಲಸಮಾಡಲು ಇಷ್ಟಪಡತಕ್ಕಂಥ ಸಂಸ್ಥೆಗಳು ಮುಂದೆ ಬಂದರೆ ಮಾಡೋಣ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಇಲ್ಲಿಯವರೆಗೆ ಆ ರೀತಿ ಎಷ್ಟು ಸಹಕಾರ ಸಂಘಗಳು ಮುಂದೆ ಬಂದು ರಿಜಿಸ್ಟರ್ ಮಾಡಿಸಿಕೊಂಡಿರುತ್ತವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲಿಯ ತನಕ ಯಾವುದೂ ಇಲ್ಲ.

Mr. SPEAKER.—Question time is over.

Member's Representation.

ಶ್ರೀ ಬಿ. ರಾಚಯ್ಯ (ಚಾಮರಾಜನಗರ).—ಅಧ್ಯಕ್ಷರೇ ನಾನು ಈ ಸದಧಿವೇಶನಕ್ಕೆ ಅನೇಕ ಪ್ರಶ್ನೆಗಳನ್ನು ಕಳಹಿಸಿದ್ದೆ. ಆದರೆ ಇಲ್ಲಿಯ ವರೆಗೂ ಒಂದು ಪ್ರಶ್ನೆಗೂ ಉತ್ತರ ಬಂದಹಾಗೆ ಕಾಣುತ್ತಿಲ್ಲ. ನಾನು ಕಳುಹಿಸಿದ್ದ ಪ್ರಶ್ನೆಗೆ ಸೆಕ್ರೆಟೇರಿಯೆಟ್ ಲೆವರ್‌ನಲ್ಲೇ ಉತ್ತರ ಬೊರೆಯುವಂತಿದಾಗ್ಲೂ ಬಹಳ ನಿಧಾನವಾಗುತ್ತಿದೆ.

ಅಧ್ಯಕ್ಷರು.—ಸದ್ಯದಲ್ಲೇ ಉತ್ತರಗಳು ಬರಬಹುದು.

Sri G. N PUTTANNA.—I sent about 10 Starred questions about the 5th November. Advance copies of these were sent by the Legislature Secretariat